ಒ ಎಸ್ ನಂ. **12/2012** ಡಿಡಬ್ಲೂ-**6**

**ದಿನಾಂಕಃ 06.04.2021.ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ-ಶ್ರೀ ಆರ್ ಎಲ್ ವಾದಿ ಪರ ವಕೀಲರಿಂದಃ**

ನಿಮಗೆ ಕನ್ನಡ ಓದಲು ಬರೆಯಲು ಬರುತ್ತದಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ವಕೀಲರ ಕಚೇರಿಯಲ್ಲಿ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಮ್ಮ ಜಮೀನಿನ ಸರ್ವೆ ನಂಬರ್ 85 ಮತ್ತು ಜವರೇಗೌಡನ ಸರ್ವೆ ನಂಬರ್ಃ 106 ಎನ್ನುತ್ತಾರೆ. ಜವರೇಗೌಡರ ಹೆಸರಿಗೆ ಸರ್ವೆ ನಂಬರ್ಃ 106 ರಕ್ಕೆ ಸಂಬಂಧಪಟ್ಟ ಆರ್ ಟಿ ಸಿ, ಮ್ಯುಟೇಷನ್ ಗಳನ್ನ ನೋಡಿದ್ದಿರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸರ್ವೆ ನಂಬರ್ಃ 85 ನಿಮ್ಮ ಜಮೀನು ಎಂದು ತೋರಿಸು ಆರ್ ಟಿ ಸಿ ಅಥವ ಮ್ಯುಟೇಷನ್ ನ್ನ ನ್ಯಾಯಾಯಕ್ಕೆ ಕೊಟ್ಟಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅಡೇನಹಳ್ಳಿ ವಿಳಾಸದಲ್ಲಿ ನೀವು ವಾಸ ಇರುವುದನ್ನ ತೋರಿಸು ಆಧಾರ್ ಕಾರ್ಡ್ ಅಥವಾ ಇತರೆ ದಾಖಲೆಗಳನ್ನ ನ್ಯಾಯಾಲಯಕ್ಕೆ ಕೊಟ್ಟಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನ್ಯಾಯಾಲಯಕ್ಕೆ ಈ ದಿನ ಜವರೇಗೌಡರ ಮಗ ಲೊಕೇಶ ನಿಮ್ಮನ್ನ ಕರೆದುಕೊಂಡು ಬಂದಿದ್ದಾನೆ ಎಂದರೆ ಸರಿ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಳಾಸದಲ್ಲಿ ನೀವು ವಾಸ ಇಲ್ಲ ಹಾಗಾಗಿ ದಾಖಲೆಗಳನ್ನ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಮ್ಮ ಜಮೀನನ್ನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿದ್ದಿರಾ ಎಂದರೆ ಸಾಕ್ಷಿ ಒಬ್ಬನೇ ಮಗ ಇದ್ದು ಜೊತೆಯಲ್ಲೇ ಇದ್ದೇವೆ ಎನ್ನುತ್ತಾರೆ. ವ್ಯವಸಾಯವನ್ನೆಲ್ಲಾ ನಿಮ್ಮ ಮಗ ಮಾಡುತ್ತಾನೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಯಾವಾಗಲಾದರೂ ಒಮ್ಮೆ ಪೈರು ಮಾಡಿದಾಗ ನಾನು ಹೋಗುತ್ತೇನೆ ಎನ್ನುತ್ತಾರೆ. ನೀವು ಯಾವಾಗಲಾದರೂ ಒಮ್ಮೆ ಪೈರು ಹಾಕುವಾಗ ಹೋಗುವ ಕಾರಣ ಆ

ಮಧ್ಯೆದಲ್ಲಿ ಯಾರು ಜಮೀನನ್ನ ಕೊಂಡಿದ್ದಾರೆ ಯಾರು ಜಮೀನುಗಳನ್ನ ಉಳುವೆ ಮಾಡುತಿದ್ದಾರೆ ಎನ್ನುವ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸರಿ. ಜವರೇಗೌಡರಿಗೆ ಸೇರಿದ ಜಮೀನುಗಳ ಸರ್ವೆ ನಂಬರ್ ಹೇಳಿ ಎಂದರೆ ಸಾಕ್ಷಿ ಹಳೆ ಸರ್ವೆ ನಂಬರ್ಃ 60 ಮತ್ತು ಹೊಸ ಸರ್ವೆ ನಂಬರ್ಃ 106 ಎನ್ನುತ್ತಾರೆ. ಬೇರೆ ಜಮೀನುಗಳು ಇಲ್ಲವಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮೊದಲು ಸರ್ವೆ ನಂಬರ್ಃ 60 ರಲ್ಲಿ ಸಾಕಷ್ಟು ಜಮೀನು ಇತ್ತಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಜಮೀನನಲ್ಲಿ ಯಾರು ಯಾರಿಗೆ ಮಂಜೂರು ಆಗಿದೆ ಗೊತ್ತಾ ಎಂದರೆ ಸಾಕ್ಷಿ ಕಾಳೇನಹಳ್ಳಿಯವರು ಜಮೀನುಗಳನ್ನ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಆ ಸಮಯದಲ್ಲಿ ಕೆಂಪಮ್ಮ ಎನ್ನುವವರಿಗೂ ಜಮೀನು ಮಂಜೂರಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂಬರ್ಃ 106 ರಲ್ಲಿ ಕೆಂಪಮ್ಮನ ಹೆಸರಿಗೆ 4 ಎಕರೆ ಜಮೀನು ಮಂಜೂರಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಕೆಂಪಮ್ಮ 1987 ರಲ್ಲಿ ಆ ಮಂಜೂರಾದ ಜಮೀನನ್ನ ವಾದಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಆ ಜಮೀನಿನಲ್ಲಿ ಈಗಲೂ ಕೂಡ ವಾದಿ ವ್ಯವಸಾಯ ಮಾಡಿಕೊಂಡು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಜವರೇಗೌಡರ ಸ್ವಾದೀನದಲ್ಲಿ ಇದ್ದಾರೆ ಎನ್ನುತ್ತಾರೆ.

ಈಗ ತೋರಿಸುತ್ತಿರುವ ಎರಡು ಪೊಟೋಗಳಲ್ಲಿ ಇರುವ ಜಮೀನು ಸರ್ವೆ ನಂಬರ್ಃ 106 ಕ್ಕೆ ಸಂಬಂಧಪಟ್ಟಿದ್ದ ಎಂದರೆ ಸಾಕ್ಷಿ ಸಂಬಂಧಪಟ್ಟಿರುವ ಹಾಗೆ ಕಾಣುತ್ತಿದೆ ಎನ್ನುತ್ತಾರೆ. ಸದರಿ ಎರಡು ಪೋಟೋಗಳನ್ನ ನಿಪಿ-12 ಮತ್ತು ನಿಪಿ-13 ಎಂದು ಗುರುತಿಸಲಾಯಿತು. 2018 ಮತ್ತು 19 ನೇ ಇಸವಿಯಲ್ಲಿ ವಾದಿ ಸದರಿ ಜಮೀನನ್ನ ಮಟ್ಟ ಮಾಡಿಸುತ್ತಿದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ

ಎನ್ನುತ್ತಾರೆ. ಸದರಿ ಪೋಟೋದಲ್ಲಿ ಇರುವ ತೆಂಗಿನ ಗಿಡಗಳು ವಾದಿ ಯಶೋದಮ್ಮನಿಗೆ ಸಂಬಂದಪಟ್ಟಿದ್ದ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-12 ಮತ್ತು 13 ರ ಪೊಟೋದಲ್ಲಿ ವಾದಿ ಮತ್ತು ಅವರ ಮಗ ನಿಂತುಕೊಂಡು ಸದರಿ ದಾವಾ ಸ್ವತ್ತನ್ನ ಮಟ್ಟ ಮಾಡಿಸುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ದಾವಾ ಸರ್ವೆ ನಂಬರ್ಃ 106 ರಲ್ಲಿ ಯಾರು ವ್ಯವಸಾಯ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಜವರೇಗೌಡ ಮಾಡುತ್ತಿದ್ದಾರೆ ಎನ್ನುತ್ತಾರೆ. ಎಷ್ಟು ಎಕರೆ ಜಮೀನನ್ನ ಜವರೇಗೌಡ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ 5 ಎಕರೆ ಜಮೀನನ್ನ ಮಾಡುತ್ತಿದ್ದಾರೆ ಎನ್ನುತ್ತಾರೆ. ಸರ್ವೆ ನಂಬರ್ಃ 106 ರಲ್ಲಿ ಜವರೇಗೌಡರಿಗೆ ಜಮೀನೇ ಇಲ್ಲಾ ಮತ್ತು ಅವರು ಅದರಲ್ಲಿ ವ್ಯವಸಾಯ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-12 ಮತ್ತು 13 ರ ಪೊಟೊದಲ್ಲಿ ವಾದಿಗಳು ಯಾವ ಜಮೀನನ್ನ ಮಟ್ಟ ಮಾಡಿಸುತ್ತಿದ್ದಾರೆ ಎನ್ನುವ ವಿಚಾರ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನು

ನೀವು ಒ ಎಸ್ 257/2002 ರಲ್ಲಿ ಜವರೇಗೌಡನ ಪರವಾಗಿ ಸಾಕ್ಷ್ಯ ನುಡಿದ್ದೀರಿ ಎಂದರೆ ಸರಿ. ಆ ದಾವೆಯಲ್ಲಿ ಕೂಡ ಯಶೋದಮ್ಮನ ವಿರುದ್ದವಾಗಿ ಸಾಕ್ಷಿ ಹೇಳಿದ್ದಿರಿ ಎಂದರೆ ಸಾಕ್ಷಿ ವಿರುದ್ದವಾಗಿ ಏನೂ ಅಲ್ಲಾ ಜವರೇಗೌಡರು ವ್ಯವಸಾಯ ಮಾಡುತ್ತಿರುವ ಬಗ್ಗೆ ಹೇಳಿದ್ದೇನೆ ಎನ್ನುತ್ತಾರೆ. ಸರ್ವೆ ನಂಬರ್ಃ 106 ರಲ್ಲಿ ಜವರೇಗೌಡರಾಗಲೀ ಅವರ ಮಕ್ಕಳಾಗಲೀ ಸ್ವಾದೀನ ಇಲ್ಲ ಆದರೂ ಕೂಡ ಜವರೇಗೌಡರ ಮಾತನ್ನ ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ.

ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ, ಚನ್ನರಾಯಪಟ್ಟಣ

OS 12/2012
DW-6

OS 12/2012
DW-6